ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಹೆಚ್.ಡಿ.ಕೋಟೆ.

## ಸಿ. ಸಿ. ನಂ. **986/2013**

ಫಿರ್ಯಾದುದಾರರುಃ ಸರ್ಕಾರದ ಪರವಾಗಿ ಪಿ.ಎಸ್.ಐ.
ಸರಗೂರು ಪೋಲಿಸ್ ಠಾಣೆ.

ವಿರುದ್ಧ

ಆರೋಪಿತರು ಃ

1. ಕುಮಾರ ಬಿನ್ ವೀರೆತ್ತಪ್ಪ, 40 ವರ್ಷ,
   ಚೆನ್ನಗುಂಡಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

2. ಚೆನ್ನ ಅಃ ಚೆನ್ನೇಗೌಡ ಬಿನ್ ಕರೀಗೌಡ, 35 ವರ್ಷ,
   ಅರಳಹಳ್ಳಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

3. ಚಿಕ್ಕಕ್ಯಾತ ಬಿನ್ ಮಾದ, 32 ವರ್ಷ,
   ಚೆನ್ನಗುಂಡಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

4. ಜಯರಾಮ ಅ್ಲ ಕಾಕನಹಳ್ಳಿ ಜಯರಾಮ
   ಬಿನ್ ವೆಂಟಕಸ್ವಾಮಿಗೌಡ, 45 ವರ್ಷ,
   ಅರಳಹಳ್ಳಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

5. ಗೋವಿಂದರಾಜು ಬಿನ್ ಗುರುವಬೋವಿ, 35 ವರ್ಷ,
   ಜಯಲಕ್ಮಿಪುರ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

6. ನಾಗೇಂದ್ರ ಬಿನ್ ಪುಟ್ಟಸೋಮಪ್ಪ, 40 ವರ್ಷ,
   ಚೆನ್ನಗುಂಡಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

7. ಗೋವಿಂದರಾಜು ಬಿನ್ ದಡಿ ರಾಮ, 35 ವರ್ಷ,
   ಜಯಲಕ್ಷ್ಮಿಪುರ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

8. ಮಾದೇವ ಅಃ ಮಹದೇವ ಬಿನ್ ದೇವಮ್ಮ, 35 ವರ್ಷ,
   ಚೆನ್ನಗುಂಡಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

9. ಮಲ್ಲು ಅಃ ವಾಟರ್‌ಮ್ಯಾನ್ ಮಲ್ಲು ಬಿನ್ ಲಿಂಗಪ್ಪ, 35 ವರ್ಷ,
   ಚೆನ್ನಗುಂಡಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

10. ಕೂಸಪ್ಪ ಬಿನ್ ಮೂಗೇಗೌಡ, 45 ವರ್ಷ,
    ಅರಳಹಳ್ಳಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

:: ದೋಷಾರೋಪಣೆ ::

ಶ್ರೀ ಕೇಶವ ಕೆ. ಬಿ.ಎ. ಎಲ್‌ಎಲ್‌ಬಿ, ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾ. ದಂ., ಹೆಚ್.ಡಿ.ಕೋಟೆ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 25-08-2012 ರಂದು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಸರಗೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಅರಳಹಳ್ಳಿ ಗ್ರಾಮದ ದಕ್ಷಿಣ ದಿಕ್ಕಿನಲ್ಲಿರುವ ಹೆಡಿಯಾಲ ಹುಲಿ ಯೋಜನೆ ಚಿಕ್ಕಬರ್ಗಿ ಚೈನ್ ಗೇಟ್‌ನಲ್ಲಿ ಚಾಸಾ-1 ರಿಂದ 7 ರವರು ಕರ್ತವ್ಯ ನಿರ್ವಹಿಸುತ್ತಿದ್ದಾಗ 1 ರಿಂದ 10ನೇ ಆರೋಪಿತರಾದ ನೀವು ಸಮಾನ ಮನಸ್ಸಿನಿಂದ ದನಗಳನ್ನು ಕಾಡಿನ ಒಳಗೆ ಬಿಡುವ ಉದ್ದೇಶಂದ ವಿಧಿ ವಿರುದ್ದದ ಕೂಟ ರಚಿಸಿಕೊಂಡು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 143 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪರಿಮಿತಿಯಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಮೇಲ್ಕಂಡ ಸಮಾನ ಉದ್ದೇಶದಿಂದ ವಿಧಿ ವಿರುದ್ದದ ಕೂಟವನ್ನು ರಚಿಸಿಕೊಂಡು ದನಗಳನ್ನು ಕಾಡಿನ ಒಳಗೆ ಬಿಡಲು ಪ್ರಯತ್ನಿಸಿದಾಗ ಚೈನ್ ಗೇಟಿನ ಕರ್ತವ್ಯ ನಿರ್ವಹಿಸುತ್ತಿದ್ದ ಚಾಸಾ-1 ಮತ್ತು ಅವರ ಸಿಬ್ಬಂದಿಗಳು ನಮ್ಮ ಮೇಲಾಧಿಕಾರಿಗಳು ದನಗಳನ್ನು ಬಿಡಬಾರದೆಂದು ಆದೇಶ ಮಾಡಿದ್ದಾರೆ, ನಮ್ಮ ಮೇಲಾಧಿಕಾರಿಗಳಿಗೆ ಫೋನ್ ಮಾಡಿದ್ದೇವೆ ಅವರು ಬರುವವರೆಗೂ ಸುಮ್ಮನೆ ಇರಿ ಎಂದು ಹೇಳುತ್ತಿದ್ದಾಗ ಆರೋಪಿತರಾದ ನೀವು ದೊಂಬಿ ಗಲಾಟೆ ಮಾಡಿ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 147 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪರಿಮಿತಿಯಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಮೇಲ್ಕಂಡ ಸಮಾನ ಉದ್ದೇಶದಿಂದ ವಿಧಿ ವಿರುದ್ದದ ಕೂಟವನ್ನು ರಚಿಸಿಕೊಂಡು ಮೇಲ್ಕಂಡಂತೆ ಜಗಳ ತೆಗೆದು, 1ನೇ ಆರೋಪಿತರಾದ ನೀವು ಚಾಸಾ-1 ರಿಂದ 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಶಾಂತತಾ ಭಂಗವನ್ನುಂಟುಮಾಡಿ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪರಿಮಿತಿಯಲ್ಲಿ ಮಾಡಿರುತ್ತೀರಿ.

ನಾಲ್ಕನೆಯದಾಗಿ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ವಿಧಿ ವಿರುದ್ದದ ಕೂಟವನ್ನು ರಚಿಸಿಕೊಂಡು ಮೇಲ್ಕಂಡಂತೆ ಜಗಳ ತೆಗೆದು, ದನಗಳನ್ನು ಒಳಗೆ ಬಿಡಲು ಗೇಟ್‌ನ್ನು ಎತ್ತುತ್ತಿದ್ದಾಗ ಚಾಸಾ-1 ರಿಂದ 3

ರವರು ಗೇಟನ್ನು ತೆಗೆಯಬೇಡಿ ಎಂದು ಗೇಟನ್ನು ಹಿಡಿದುಕೊಂಡಾಗ ಆರೋಪಿತರಾದ ನೀವು ಗೇಟನ್ನು ಜಾಡಿಸಿ ತಳ್ಳಿದಾಗ ಗೇಟಿನ ರಾಡು ಚಾಸಾ-1ರವರ ಕೈಗೆ ಚುಚ್ಚಿ ರಕ್ತಗಾಯವಾಗಿದ್ದು ಹಾಗೂ ಚಾಸಾ-1 ಮತ್ತು 2 ರವರಿಗೆ ತರಚಿದ ಗಾಯವಾಗಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 332 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪರಿಮಿತಿಯಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ವಿಧಿ ವಿರುದ್ದದ ಕೂಟವನ್ನು ರಚಿಸಿಕೊಂಡು ಮೇಲ್ಕಂಡಂತೆ ಜಗಳ ತೆಗೆದು, ಚಾಸಾ-1 ರಿಂದ 7 ರವರು ಸರ್ಕಾರಿ ಕೆಲಸವನ್ನು ನಿರ್ವಹಿಸದಂತೆ ಅಡ್ಡಿಯನ್ನುಂಟುಮಾಡಿ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 353 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪರಿಮಿತಿಯಲ್ಲಿ ಮಾಡಿರುತ್ತೀರಿ.

ಈ ಮೇಲಿನ ಆರೋಪಗಳಿಗಾಗಿ ಆರೋಪಿತರಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸುತ್ತೇನೆ.

**(ಕೇಶವ. ಕೆ)**

ದಿನಾಂಕಃ **23/09/2016**

ಹೆಚ್ಚುವರಿ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.,
ಹೆಗ್ಗಡದೇವನಕೋಟೆ.